ಪಾಠ 1

# ಹೊಸ ಜೀವಿತವನ್ನು ಪ್ರಾರಂಭಿಸಿರಿ



**ಈ ಪಾಠದಲ್ಲಿ ನೀವು ಕಲಿಯುವ ಅಂಶಗಳು:**

ಏನಾಗುವುದು?
ಕ್ರಿಸ್ತನಲ್ಲಿ ಹೊಸ ಜೀವಿತ
ಯಾವ ರೀತಿಯ ಜೀವತ?
ನೀವು ಅದಕ್ಕಾಗಿ ಮಾಡಬೇಕಾದದ್ದೇನು?
ನಿಮ್ಮ ಹೊಸ ಕುಟುಂಬ: ನಿಮ್ಮ ತಂದೆ
ನಿಮ್ಮ ಹೊಸ ಕುಟುಂಬ: ನಿಮ್ಮ ಹಿರಿಯ ಸಹೋದರ
ನಿಮ್ಮ ಹೊಸ ಕುಟುಂಬ: ಪರಿಶುದ್ಧಾತ್ಮನು, ನಿಮ್ಮ ಸಹಾಯಕನು
ನಿಮ್ಮ ಹೊಸ ಕುಟುಂಬ: ಇತರ ವಿಶ್ವಾಸಿಗಭಳು

## ಏನಾಗುವುದು?

ನೀವು ಯೇಸುಕ್ರಿಸ್ತನನ್ನು ಅಂಗೀಕರಿಸಿದ ಕ್ಷಣದಲ್ಲಿಯೇ, ನೀವು ಹೊಸ ಜೀವಿತವನ್ನು ಪ್ರಾರಂಭಿಸುತ್ತೀರಿ. ಆತನು ಜೀವಿತವನ್ನು ಕೊಡುವವನು ನಿರಂತರವಾದ ಆಶ್ಚರ್ಯಕರ, ಐಶ್ವರ್ಯವುಳ್ಳ ಮತ್ತು ಆನಂದಭರಿತವುಳ್ಳ ಜೀವಿತವನ್ನು ಕೊಡುತ್ತಾನೆ. ನೀವು ಆತನಿಗೆ ನಿಮ್ಮ ಜೀವಿತದ ಎಲ್ಲಾ ಪಾಪಗಳನ್ನು ಮತ್ತು ಸೋಲುಗಳನ್ನು ಒಪ್ಪಿಸಿರಿ, ಮತ್ತು ಆತನು ನಿಮಗೆ ತನ್ನ ಜಯಭರಿತ ಜೀವಿತವನ್ನು ಕೊಡುವನು. ದೇವರ ಮಗನಿರುವಂತಹ ಮಹಿಮೆಯುಳ್ಳ ಸದಾವಕಾಶಗಳಿಂದ ನಿಮ್ಮ ಜೀವಿತವನ್ನು ಪ್ರಾರಂಭಿಸುವಿರಿ.

**ನೀವು ಮಾಡಬೇಕಾದದ್ದು**

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ನು ಹಾಕಿರಿ.

1. ಹೊಸ ಜೀವಿತ ಎಲ್ಲಿಂದ ಬರುವುದು?

...ಅ] ಕ್ರೈಸ್ತನಾಗಲು ಪ್ರಯತ್ನಿಸುವುದರಿಂದ

...ಆ] ಜೀವವನ್ನು ಕೊಡುವ... ಯೇಸುಕ್ರಿಸ್ತನಿಂದ

...ಇ] ಸಭೆಯಲ್ಲಿ ಸೇರುವುದರಿಂದ

ನೀವು ನಿಮ್ಮ ಸ್ವಂತ ಉತ್ತರಗಳನ್ನು 'ನೀವು ಮಾಡಬೇಕಾದದ್ದರಲ್ಲಿ ಬರೆಯುವ ಮೊದಲು ಉತ್ತರವಿರುವ ಕಡೆಗೆ ಮುಚ್ಚಿರಿ.

ಉತ್ತರ: ಆ) ಜೀವವನ್ನು ಕೊಡುವ - ಯೇಸು ಕ್ರಿಸ್ತನಿಂದ

## ಕ್ರಿಸ್ತನಲ್ಲಿ ಹೊಸ ಜೀವಿತ

ಯೇಸು ನಿಮ್ಮಲ್ಲಿರುವುದರಿಂದ ಈ ಹೊಸ ಜೀವ ನಿಮಗೆ ಉಂಟು ದೇವರ ವಾಕ್ಯವಾದ ಸತ್ಯವೇದವು ಇದರ ಕುರಿತು ತಿಳಿಸುತ್ತದೆ.

ಕೊಲೊಸ್ಸೆ 1:27 ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರ ಭೂತನಾಗಿರುವನು.

ಮೇಲೆ ಉಲ್ಲೇಖಿಸಲಾದ ವಚನವು ಸತ್ಯವೇದದಲ್ಲಿ ಯಾವ ಪುಸ್ತಕದಲ್ಲಿ ಎಷ್ಟನೇ ಅಧ್ಯಾಯದಲ್ಲಿ ಮತ್ತು ವಚನದಲ್ಲಿ ಸಿಕ್ಕುವುದೆಂದು ತಿಳಿಸುತ್ತದೆ.

**ನೀವು ಮಾಡಬೇಕಾದದ್ದು**

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ನು ಹಾಕಿರಿ

2. ನಿಮ್ಮಲ್ಲಿರುವ ಕ್ರಿಸ್ತನಿಂದ ಆ ಜೀವಿತ ಸಿಕ್ಕುವುದೆಂದು ನಾವು ಎಲ್ಲಿಂದ ಕಲಿಯುತ್ತೇವೆ.

...ಅ) ದೇವರ ವಾಕ್ಯವಾದ, ಸತ್ಯವೇದದಿಂದ

...ಆ) ವಿಜ್ಞಾನದಿಂದ

...ಇ) ಬೇರೆ ಬೇರೆ ಮತಗಳಿಂದ

ಉತ್ತರ : 2 ಅ) ದೇವರ ವಾಕ್ಯವಾದ, ಸತ್ಯವೇದದಿಂದ

## ಯಾವ ರೀತಿಯ ಜೀವಿತ

ಕ್ರಿಸ್ತನು ನಿಮ್ಮಲ್ಲಿ ಜೀವಿಸುವುದರಿಂದ ನೀವು ಶಿಷ್ಯರಾಗುವಿರಿ. ಕೆಲವು ಜನರು ಶಿಷ್ಯನ ಜೀವಿತವೆಂದರೆ ನಿಸ್ತೇಜವಾದ, ಸೆರೆಮನೆಯಲ್ಲಿರುವ ಜೀವಿತ ಯೋಚಿಸುತ್ತಾರೆ. ಇದಕ್ಕಿಂತ ಹೆಚ್ಚಾಗಿ ಅವರು ತಪ್ಪಾಗಿ ಭಾವಿಸಲಿಲ್ಲ, ಕ್ರಿಸ್ತನಲ್ಲಿರುವ ನಿಮ್ಮ ಜೀವಿತ ನೀವು ನೆನಸದ ರೀತಿಯಲ್ಲಿ, ಐಶ್ವರ್ಯವುಳ್ಳ, ಪೂರ್ಣವಾದ ಮತ್ತು ಸಂತೋಷವುಳ್ಳದ್ದಾಗಿರುವುದು.

### ನೀವು ಮಾಡಬೇಕಾದದ್ದು

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ನು ಹಾಕಿರಿ

3. ಯೇಸುಕ್ರಿಸ್ತನನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದಾಗ ನಡಿಸುವ ಜೀವಿತವು.

   ...ಅ) ದುಃಖ ಭರಿತವಾಗಿರುತ್ತದೆ.

   ...ಆ) ಮೊದಲಿನ ಜೀವಿತಕ್ಕಿಂತಲೂ ಹೆಚ್ಚು ಆನಂದಭರಿತವಾಗಿರುತ್ತದೆ.

   ...ಇ) ಸೆರೆ ಮೆನಯಲ್ಲಿರುವಂತೆ ಇರುತ್ತದೆ.

ಉತ್ತರ : 3ಆ) ಮೊದಲಿನ ಜೀವಿತಕ್ಕಿಂತಲೂ ಹೆಚ್ಚು ಆನಂದಭರಿತವಾಗಿರುತ್ತದೆ.

ಯೋಹಾನ 10:10 ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಸಮೃದ್ಧಿಯು ಇರಬೇಕೆಂತಲೂ ಬಂದೆನು.

### ನೀವು ಮಾಡಬೇಕಾದದ್ದು

4. ಯೋಹಾನ 10:10ರಲ್ಲಿರುವ ಯೇಸುವಿನ ಮಾತುಗಳನ್ನು ಬಾಯಿಪಾಠ ಮಾಡಿರಿ.

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ನು ಹಾಕಿರಿ

5. ಯೇಸು ಕ್ರಿಸ್ತನು ಈ ಲೋಕಕ್ಕೆ ಬಂದದ್ದು

   ...ಅ) ನಮ್ಮ ಪಾಪಗಳನ್ನು ಖಂಡಿಸಲು

   ...ಆ) ಸಮೃದ್ಧಿಯಾದ ಜೀವನ ಕೊಡಲು

ಉತ್ತರ : 5 ಅ) ಸಮೃದ್ಧಿಯಾದ ಜೀವಿತ ಕೊಡಲು

ಯೇಸು ಕೊಡುವ ಈ ಹೊಸ ಜೀವಿತದಲ್ಲಿ, ನೀವು ಹೊಸ ತಿಳುವಳಿಕೆ, ಹೊಸ ನೋಟ, ಹೊಸ ಗುರಿಗಳು ಮತ್ತು ಜೀವಿತದ ಹೊಸ ಉದ್ದೇಶಗಳನ್ನು ಕಂಡುಕೊಳ್ಳುವಿರಿ.

ಕಳಂಕದ ಹೊರೆಯು ಹೋಯಿತು: ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟವು. ದೇವರಿಗೋಸ್ಕರ ಮತ್ತು ಇತರರಿಗೋಸ್ಕರ ಒಂದು ಹೊಸ ಪ್ರೀತಿಯನ್ನು ನಿಮ್ಮ ಹೃದಯದಲ್ಲಿ ತುಂಬಿ, ನಿಮಗೆ ಶಾಂತಿ ಮತ್ತು ಸಂತೋಷವನ್ನು ತರುತ್ತದೆ. ಎಲ್ಲಾ ಉತ್ತಮವಾದ ಮತ್ತು ಸುಂದರವಾದುದ್ದನ್ನು ನೀವು ಒಂದು ಹೊಸ ರೀತಿಯಲ್ಲಿ ಮೆಚ್ಚುವಿರಿ ಮತ್ತು ದೇವರ ಪ್ರಸನ್ನತೆ, ಶಕ್ತಿ ಮತ್ತು ಒಳ್ಳೇತನದ ಒಂದು ಹೊಸ ಅರಿವು ನಿಮ್ಮಲ್ಲಿ ಆಗುವುದು. ದೇವರನ್ನು ಮೆಚ್ಚಿಸಲು ಹೊಸ ಆಶೆಗಳು ಮತ್ತು ಇತರರಿಗೆ ಸಹಾಯ ಮಾಡುವುದು ನಿಮ್ಮ ಎಲ್ಲಾ ಕಾರ್ಯಗಳಿಗೆ ಒಂದು ಹೊಸ ತಿರುವನ್ನು ಕೊಡುವುದರ ಆರಂಭವಾಗಿದೆ.




ಪವಿತ್ರಾತ್ಮನು ನಿಮ್ಮಲ್ಲಿ ಉಂಟುಮಾಡುವ ಮಾರ್ಪಾಡಿಗಿಂತಲೂ ಹೆಚ್ಚಿನ ಮಾರ್ಪಾಡನ್ನು ಕಂಬಳಿಹುಳುವು ತಾನು ಚಿಟ್ಟೆಯಾಗುವಾಗಲೂ ಅನುಭವಿಸಲಾರದು. ನೀವು ಈಗ ಕಂಬಳಿಹುಳದ ಹಾಗಿಲ್ಲ, ಜೀವನವಿಡಿ ತೆವಳುವುದು ಕ್ರಿಸ್ತನು ನಿಮ್ಮನ್ನು ಮಾರ್ಪಾಡಿಸಿ, ಒಬ್ಬ ಹೊಸ ವ್ಯಕ್ತಿಯಾಗುವಂತೆ ಮಾಡುವನು ಮತ್ತು ಆತ್ಮೀಕ ರೆಕ್ಕೆಗಳನ್ನು ನಿಮಗೆ ಕೊಡುವನು. ನೀವು ಹೊಸದಾಗಿ ಹುಟ್ಟಿದವರು ಮತ್ತು ಇನ್ನೆಂದಿಗೂ ಪಾಪಿಗಳಲ್ಲ, ನೀವು ದೇವರ ಮಗುವಾಗುವಿರಿ.

## ನೀವು ಮಾಡಬೇಕಾದದ್ದು

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ನು ಹಾಕಿರಿ

6. ನಿಮ್ಮ ಹೊಸ ಜೀವಿತದಲ್ಲಿ ಈ ಸಂಗತಿಗಳಲ್ಲಿ ಯಾವುದನ್ನು ನೀವು ಬಯಸುವಿರಿ?

...ಅ) ಹೊಸ ನೋಟ

...ಆ) ಹೆಚ್ಚು ಹಣ

...ಇ) ನಿಮ್ಮ ಸ್ನೇಹಿತರಲ್ಲಿ ಹೆಚ್ಚಿನ ಜನಪ್ರಿಯತೆ

7. ನೀವು ಹೊಸದಾಗಿ ಹುಟ್ಟಿದಾಗ ನೀವು ಆರಂಭಿಸುವ ಜೀವಿತವು

...ಅ) ಸಮಸ್ಯೆಗಳಿಂದ ಬಿಡುಗಡೆ ತರುತ್ತದೆ.

...ಆ) ದೇವರ ಮತ್ತು ಇತರರ ಕಡೆಗೆ ಸಂಪೂರ್ಣ ಪ್ರೀತಿ

...ಇ) ಮನಸ್ಸಿಗೆ ಬಂದಂತೆ ಜೀವಿಸಲು ಸ್ವಾತಂತ್ರ್ಯ ಕೊಡುತ್ತದೆ

**ಉತ್ತರಗಳು** ಅ) ಹೊಸ ನೋಟ ಆ) ದೇವರ ಮತ್ತು ಇತರರ ಕಡೆಗೆ ಸಂಪೂರ್ಣ ಪ್ರೀತಿ

## ನೀವು ಅದಕ್ಕಾಗಿ ಮಾಡಬೇಕಾದದ್ದೇನು?

ದೇವರ ಕುಟುಂಬದಲ್ಲಿ ಹೊಸದಾಗಿ ಜನಿಸಿದ ಮಗುವಂತೆ ನೀವು ಆತನ ಪ್ರೀತಿಯ ಪಾಲನೆಯಲ್ಲಿ ಸಂತೋಷಿಸುವಿರಿ. ನೀವು ಆರೋಗ್ಯದಿಂದಲೂ ಮತ್ತು ಸದೃಢರಾಗಿಯೂ ಇರಲು ಆತನು ನಿಮಗಾಗಿ ಇಟ್ಟಿರುವ ಕೊಡುವಿಕೆಗಳನ್ನು ನೀವು ಸ್ವೀಕರಿಸಬೇಕು. ಆತನು ನಿಮಗೆ ಒಂದು ಹೊಸ ಸ್ವಭಾವವನ್ನು ಕೊಟ್ಟಿದ್ದಾನೆ ಮತ್ತು ನೀವು ಅದನ್ನು ಅಭಿವೃದ್ಧಿಗೊಳಿಸಲು ನಿಮ್ಮ ಕರ್ತವ್ಯವನ್ನು ಮಾಡಬೇಕು.

ನೀವು ಹೊಸ ಸ್ವಭಾವವನ್ನು ವೃದ್ಧಿಗೊಳಿಸಲು ಈ ಪುಸ್ತಕ ಸಹಾಯ ಮಾಡುತ್ತದೆ. ನೀವು ಈ ಪಾಠಗಳನ್ನು ಅಭ್ಯಾಸಿಸಿದಂತೆ ಒಬ್ಬ ದೇವರ ಮಗನಿಗಿರುವ ಹೊಸ ಸದಾವಕಾಶಗಳ ಮತ್ತು ಜವಾಬ್ದಾರಿಕೆಗಳ ಕುರಿತು ಕಲಿಯುವಿರಿ. ನೀವು ಭೂಮಿಯ ಮೇಲೆ ಇರುವ ಕಾಲವೆಲ್ಲಾ ಇವುಗಳನ್ನು ಸಂಪೂರ್ಣವಾಗಿ ಅನುಭವಿಸಿರಿ. ನಂತರ, ಒಂದು ದಿನ ಯೇಸುವು ತನ್ನ ಸ್ವರ್ಗದ ಮನೆಯಲ್ಲಿ ತನ್ನೊಡನೆ ವಾಸಿಸಲು ನಿಮ್ಮನ್ನು ಕರೆದೊಯ್ಯುವನು. ಆ ಮನೆಯು ಈ ಲೋಕದ ಯಾವುದೇ ಸಂಗತಿಗಿಂತ ಸಾವಿರ ಪಾಲು ಮಿಗಿಲಾಗಿರುವುದು.

**ನೀವು ಮಾಡಬೇಕಾದದ್ದು**

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ನು ಹಾಕಿರಿ

8. ಈ ಪುಸ್ತಕ ಯಾವುದರ ಕುರಿತಾಗಿದೆ?

...ಅ) ಒಬ್ಬ ಸಭಾಸದಸ್ಯನ ಜೀವಿತದ ಕುರಿತು

...ಆ) ದೇವರು ಕೊಡುವ ಹೊಸ ಸ್ವಭಾವದ ಕುರಿತು

...ಇ) ಕ್ರೈಸ್ತರು ಅನುಸರಿಸಬೇಕಾದ ಕಾನೂನುಗಳನ್ನು ಕುರಿತು

9. ನೀವು ಈ ಪಾಠಗಳನ್ನು ಅಭ್ಯಾಸಿಸುವುದರ ಕಾರಣ

...ಅ) ಯೋಗ್ಯತಾ ಪತ್ರ ಸಿಕ್ಕಲೆಂದು

...ಆ) ಮತದ ಬಗ್ಗೆ ಕುರಿತು ಚರ್ಚಿಸಲೆಂದು

...ಇ) ದೇವರ ಮಗುವಾಗಿ ಸದಾವಕಾಶಗಳಲ್ಲಿ ಸಂತೋಷಿಸಲೆಂದು

**ಉತ್ತರಗಳು** : 8 ಆ) ದೇವರು ಕೊಡುವ ಹೊಸ ಸ್ವಭಾವದ ಕುರಿತು 9 ಇ) ದೇವರ ಮಗುವಾಗಿ ಸದಾವಕಾಶಗಳಲ್ಲಿ ಸಂತೋಷಿಸಲೆಂದು



ನೀವು ಮಾಡಬೇಕಾದ ಮುಖ್ಯ ಕಾರ್ಯವೇನೆಂದರೆ ಕ್ರಿಸ್ತನ ಅನ್ಯೋನ್ಯತೆಯಲ್ಲಿ ನೆಲೆಯಾಗಿರ್ರಿ ಮತ್ತು ಆತನು ಕೊಡುವ ಜೀವಿತದಲ್ಲಿ ಬಲವಾಗಿ ವೃದ್ಧಿಯಾಗಿರ್ರಿ.

ಯೋಹಾನ 15:4,5 ನೀವು ನನ್ನಲ್ಲಿ ನೆಲೆಗೊಂಡರ್ರಿ, ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು... ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ. ಕೊಲೊಸ್ಸೆಯವರಿಗೆ 2:6,7 ಆದ್ದರಿಂದ ನೀವು ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದಂತೆಯೇ ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ. ಆತನಲ್ಲಿ ಬೇರೂರಿಕೊಂಡು ಭಕ್ತಿವೃದ್ಧಿಯನ್ನು ಹೊಂದಿ ನಿಮಗೆ ಬೋಧಿಸಲ್ಪಟ್ಟ ಉಪದೇಶದ ಪ್ರಕಾರವೇ ಕ್ರಿಸ್ತನಂಬಿಕೆಯಲ್ಲಿ ನೆಲೆಗೊಂಡು ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರಮಾಡುವವರಾಗಿರಿ.

**ನೀವು ಮಾಡಬೇಕಾದದ್ದು**

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ನು ಹಾಕಿರಿ

10. ಒಬ್ಬ ದೃಢ ಶಿಷ್ಯನಾಗಲು ನೀವು ಮಾಡಬೇಕಾದ ಮುಖ್ಯ ಕಾರ್ಯವೇನು?

...ಅ) ಕ್ರಿಸ್ತನ ಅನ್ಯೋನ್ಯತೆಯಲ್ಲಿ ನೆಲೆಯಾಗುವುದು

...ಆ) ಕ್ರಿಸ್ತನ ಹಾಗೆ ಇರಲು ಪ್ರಯತ್ನಿಸುವುದು

...ಇ) ಇತರ ಕ್ರೈಸ್ತರಂತೆ ಇರುವುದು

**ಉತ್ತರ** : 10 ಅ) ಕ್ರಿಸ್ತನ ಅನ್ಯೋನತೆಯಲ್ಲಿ ನೆಲೆಯಾಗಿರುವುದು

## ನಿಮ್ಮ ಹೊಸ ಕುಟುಂಬ : ನಿಮ್ಮ ತಂದೆ

ಈ ವಿಶ್ವವನ್ನು ಉಂಟು ಮಾಡಿದ ಸರ್ವಶಕ್ತನಾದ ದೇವರು ನಿಮ್ಮ ತಂದೆಯಾಗಿರುತ್ತಾನೆ. ಆತನು ಬಹಳ ಶಿಸ್ತಿನವನೆಂದು ಮತ್ತು ದೂರದಲ್ಲಿರುವನೆಂದು ಯೋಚಿಸಬೇಡಿರಿ. ಆತನು ನಿಮ್ಮ ಹತ್ತಿರದಲ್ಲಿಯೇ ಇದ್ದಾನೆ ಮತ್ತು ನಿಮ್ಮ ಎಲ್ಲಾ ಸಮಸ್ಯೆಗಳಲ್ಲಿ ಸಹಾಯ ಮಾಡಲು ಕಾತುರನಾಗಿದ್ದಾನೆ.

ಒಬ್ಬ ಕರುಣೆಯುಳ್ಳ ಮತ್ತು ತಿಳುವಳಿಕೆಯುಳ್ಳ ತಂದೆಯೊಂದಿಗೆ ಒಂದು ಮಗುವು ಮಾತಾಡುವಂತೆ ನೀವು ಆತನೊಂದಿಗೆ ಮನಬಿಚ್ಚಿ ಧೈರ್ಯದಿಂದ ಮಾತನಾಡಬೇಕೆಂದು ನಿಮ್ಮ ತಂದೆ ಅಪೇಕ್ಷಿಸುತ್ತಾನೆ. ನೀವು ಪ್ರತಿದಿನ ಹಗಲು ಅಥವಾ ರಾತ್ರಿಯ ಯಾವುದೇ ಸಮಯದಲ್ಲಿ ಆತನೊಂದಿಗೆ ಪ್ರಾರ್ಥನೆಯ ಮೂಲಕ ಮಾತಾಡಿರಿ. ನಿಮ್ಮ ಎಲ್ಲಾ ಸಮಸ್ಯೆಗಳನ್ನು ಆತನಿಗೆ ಹೇಳಿರಿ. ಆತನ ಆಶೀರ್ವಾದಗಳಿಗಾಗಿ ಆತನನ್ನು ಸ್ತುತಿಸಿರಿ. ಆತನು ನಿಮ್ಮನ್ನು ಕುರಿತು ಮತ್ತು ನಿಮಗೆ ಸಂಭವಿಸುವುದರ ಕುರಿತು ಆಸಕ್ತನಾಗಿದ್ದಾನೆ. ನೀವು ಆತನಿಗೆ ಸುಂದರ ಪದಗಳನ್ನು ಉಪಯೋಗಿಸದೆ ಅಥವಾ ಬಾಯಿಪಾಠ ಮಾಡಿದ ಪ್ರಾರ್ಥನೆಯನ್ನು ಮಾಡದೆ; ನಿಮ್ಮ ಹೃದಯದಲ್ಲಿರುವುದನ್ನು ಆತನಿಗೆ ಹೇಳಿರಿ.

### ನೀವು ಮಾಡಬೇಕಾದದ್ದು

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ನು ಹಾಕಿರಿ

11. ನಿಮ್ಮ ಈ ಹೊಸಜೀವಿತದಲ್ಲಿ ದೇವರು

...ಅ) ದೂರದಲ್ಲಿರುವಂತೆ ಇರುವನು

...ಆ) ಒಬ್ಬ ಪ್ರೀತಿಯುಳ್ಳ ತಂದೆಯಾಗಿರುವನು

12. ನೀವು ಪ್ರಾರ್ಥಿಸುವಾಗ ಏನು ಮಾಡಬೇಕು?

...ಅ) ಬಾಯಿಪಾಠ ಮಾಡಿದ ಪ್ರಾರ್ಥನೆಯನ್ನು ಪಠಿಸಬೇಕು

...ಆ) ಒಬ್ಬ ಮಗನು ತನ್ನ ತಂದೆಯೊಂದಿಗೆ ಮಾತಾಡುವಂತೆ ದೇವರೊಂದಿಗೆ ಮನಬಿಚ್ಚಿ ಮಾತಾಡಬೇಕು.

...ಇ) ಸುಂದರ ಪದಗಳನ್ನು ಮತ್ತು ಚತುರ ನುಡಿಗಳನ್ನು ಉಪಯೋಗಿಸಬೇಕು.

**ಉತ್ತರಗಳು** : 11 ಆ) ಒಬ್ಬ ಪ್ರೀತಿಯುಳ್ಳ ತಂದೆಯಾಗಿರುವನು 12 ಆ) ಒಬ್ಬ ಮಗನು ತನ್ನ ತಂದೆಯೊಂದಿಗೆ ಮಾತಾಡುವಂತೆ ದೇವರೊಂದಿಗೆ ಮನಬಿಚ್ಚಿ ಮಾತಾಡಬೇಕು.

## ನಿಮ್ಮ ಹೊಸ ಕುಟುಂಬ : ಹಿರಿಯ ಸಹೋದರನು

ದೇವರ ಕುಟುಂಬದಲ್ಲಿ ಯೇಸು ಕ್ರಿಸ್ತನು ನಿಮ್ಮ ಹಿರಿಯ ಸಹೋದರನಾಗಿರುತ್ತಾನೆ. ಆತನು ನಿಮ್ಮನ್ನು ರಕ್ಷಿಸಲು ತನ್ನ ಪ್ರಾಣವನ್ನೇ ಕೊಟ್ಟನು. ನೀವು ಪಾಪದ ಮೇಲೆ ಜಯ ಹೊಂದಿ ಆನಂದಭರಿತ ಜೀವಿತ ನಡಿಸಲು ನಿಮಗೆ ಸಹಾಯ ಮಾಡಲು ಅಪೇಕ್ಷಿಸುತ್ತಾನೆ. ಆತನು ನಿಮ್ಮನ್ನು ರಕ್ಷಿಸಿದ್ದಕ್ಕಾಗಿ ಮತ್ತು ಪ್ರತಿದಿನ ನಿಮಗೆ ಸಹಾಯಮಾಡುತ್ತಿರುವುದಕ್ಕಾಗಿ ಆತನಿಗೆ ಸ್ತೋತ್ರ ಹೇಳಿರಿ.

### ನೀವು ಮಾಡಬೇಕಾದದ್ದು

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ನು ಹಾಕಿರಿ

13. ಈ ನಿಮ್ಮ ಹೊಸ ಜೀವಿತದಲ್ಲಿ ಯೇಸುಕ್ರಿಸ್ತನು ನಿಮಗೆ

...ಅ) ರಕ್ಷಕನು ಮತ್ತು ಹಿರಿಯ ಸಹೋದರನಾಗಿರುತ್ತಾನೆ

...ಆ) ಕಠಿಣ ನ್ಯಾಯಾಧೀಶನಾಗಿರುತ್ತಾನೆ

ಉತ್ತರ 13ಅ) ರಕ್ಷಕನು ಮತ್ತು ಹಿರಿಯ ಸಹೋದರನಾಗಿರುತ್ತಾನೆ.

## ನಿಮ್ಮ ಹೊಸ ಕುಟುಂಬ: ಪರಿಶುದ್ಧಾತ್ಮನು, ನಿಮ್ಮ ಸಹಾಯಕನು

ನಿಮ್ಮಲ್ಲಿ ಹೊಸ ಹುಟ್ಟುವಿಕೆಯ ರಹಸ್ಯವಾದ ಅದ್ಭುತವನ್ನು ಮಾಡಿದವನು ಪರಿಶುದ್ಧಾತ್ಮನೇ, ಆತನೇ ನಿಮ್ಮ ಪಾಪದ ಸ್ವಭಾವವನ್ನು ಮಾರ್ಪಡಿಸುವನು ಮತ್ತು ನಿಮ್ಮನ್ನು ದೇವರ ಮಗುವಾಗಿ ಮಾಡುವನು.

ಹೀಗಿರವಾಗಲೂ ಅನೇಕ ವೇಳೆಗಳಲ್ಲಿ ನೀವು ನಿಮ್ಮ ಹಳೆಯ ಸ್ವಭಾವದೊಂದಿಗೆ ಹೋರಾಡಬೇಕಾಗುತ್ತದೆ. ಆದರೆ ಪವಿತ್ರಾತ್ಮನು ನಿಮ್ಮಲ್ಲಿ ಜೀವಿಸಿ, ನಿಮಗೆ ಸಹಾಯ ಮಾಡುವನು. ನೀವು ಆತನೊಂದಿಗೆ ನಂಬಿಕೆಯಲ್ಲಿ ಮತ್ತು ವಿಧೇಯತೆಯಲ್ಲಿ ಸಹಕರಿಸಿದರೆ ಆತನು ನೀವು ಮಾಡಬೇಕಾದದ್ದನನು ಹೇಳಿ ಆದನನು ·ಮಾಡಲು ನಿಮಗೆ ಶಕ್ತಿಯನ್ನು ಕೊಡುವನು.

### ನೀವು ಮಾಡಬೇಕಾದದ್ದು

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ ಹಾಕಿರಿ.

14. ಹೊಸ ಹುಟ್ಟುವಿಕೆಯ ಅದ್ಭುತವು ನಿಮ್ಮಲ್ಲಿ ಉಂಟಾದದ್ದು
    ...ಅ) ಸುವಾರ್ತಿಕರಿಂದ
    ...ಆ) ಬೋಧಕರಿಂದ
    ...ಇ) ಪರಿಶುದ್ಧಾತ್ಮನಿಂದ
15. ನಿಮ್ಮಲ್ಲಿ ಪರಿಶುದ್ಧಾತ್ಮನಿರುವ ಕಾರಣವು
    ...ಅ) ನೀವು ಪ್ರತಿಸಾರಿ ತಪ್ಪು ಮಾಡಿದಾಗ ನಿಮ್ಮನ್ನು ಶಿಕ್ಷಿಸಲೆಂದು
    ...ಆ) ನಿಮ್ಮಲ್ಲಿ ಇರಲೆಂದು ಮತ್ತು ನೀವು ಸರಿಯಾದದ್ದನ್ನು ಮಾಡಲು ಸಹಾಯ ಮಾಡಲೆಂದು
16. ದೇವರು ಇಚ್ಚಿಸುವುದನ್ನು ನೀವು ಮಾಡುತ್ತೀರಿ
    ...ಅ) ಸ್ವಯಂಚಾಲಿತವಾಗಿ
    ...ಆ) ಯಾಕಂದರೆ ಪರಿಶುದ್ಧಾತ್ಮನು ಹಾಗೆ ಮಾಡಲು ನಿಮ್ಮನ್ನು ಒತ್ತಾಯಿಸುವುದರಿಂದ
    ...ಇ) ನೀವು ನಂಬಿಕೆ ಮತ್ತು ವಿಧೇಯತೆಯಲ್ಲಿ ಪವಿತ್ರಾತ್ಮನೊಂದಿಗೆ ಸಹಕರಿಸುವುದರಿಂದ

17. ನೀವು ಮಾಡಬೇಕಾದದ್ದು ನಿಮಗೆ ತಿಳಿಯುತ್ತದೆ ಮತ್ತು ಹಾಗೆ ಮಾಡಲು ಸಹಾಯ ಸಿಕ್ಕುವುದು

...ಅ) ಸ್ವಚಾಣಾಕ್ಷತನದಿಂದ

...ಆ) ಮನದ ದೃಢಸಂಕಲ್ಪದಿಂದ

...ಇ) ಪವಿತ್ರಾತ್ಮನ ಸಹಾಯದಿಂದ

**ಉತ್ತರಗಳು** : 14ಇ) ಪರಿಶುದ್ಧಾತ್ಮನಿಂದ 15ಆ) ನಿಮ್ಮಲ್ಲಿ ಇರಲೆಂದು ಮತ್ತು ಸರಿಯಾದದ್ದನ್ನು ಮಾಡಲು ಸಹಾಯ ಮಾಡಲೆಂದು 16ಇ) ನೀವು ನಂಬಿಕೆ ಮತ್ತು ವಿಧೇಯತೆಯಲ್ಲಿ ಪವಿತ್ರಾತ್ಮನೊಂದಿಗೆ ಸಹಕರಿಸುವುದರಿಂದ 17ಇ) ಪವಿತ್ರಾತ್ಮನ ಸಹಾಯದಿಂದ

## ನಿಮ್ಮ ಹೊಸ ಕುಟುಂಬ: ಇತರ ವಿಶ್ವಾಸಿಗಳು

ಹೊಸದಾಗಿ ಹುಟ್ಟಿದ ಪ್ರತಿಯೊಬ್ಬ ನಿಜ ಶಿಷ್ಯನು ದೇವರ ಮಗುವಾಗಿದ್ದಾನೆ. ದೇವರು ನಮ್ಮ ತಂದೆ, ನಾವೆಲ್ಲರೂ ಸಹೋದರ-ಸಹೋದರಿಯರು ಆಗಿದ್ದೇವೆ.

ಹಿರಿಯ ಶಿಷ್ಯರು ನಿಮ್ಮನ್ನು ಹೊಸ ಸಹೋದರ ಇಲ್ಲವೆ ಸಹೋದರಿಯೆಂದು ದೇವರ ಕುಟುಂಬಕ್ಕೆ ಸ್ವಾಗತಿಸುತ್ತಾರೆ. ನೀವು ಆತ್ಮೀಕವಾಗಿ ಬೆಳೆದು ಮತ್ತು ಒಬ್ಬ ಬಲವುಳ್ಳ, ಆರೋಗ್ಯವಂತ ಶಿಷ್ಯನಾಗಿ ಮಾಡಲು ನಿಮಗೆ ಅವರು ಎಲ್ಲ ತರಹದ ಸಹಾಯಗಳನ್ನು ನೀಡಲು ಅಪೇಕ್ಷಿಸುತ್ತಾರೆ.

ನಿಮಗೆ ಸಮಸ್ಯೆ ಇರುವಾಗ ನಿಮ್ಮ ಬೋಧಕರೊಂದಿಗೆ ಮತ್ತು ಇತರ ಸಹೋದರ ಮತ್ತು ಸಹೋದರಿಯರೊಂದಿಗೆ ಮಾತನಾಡಿರಿ. ಅವರು ಅದಕ್ಕಾಗಿ ನಿಮ್ಮೊಂದಿಗೆ ಪ್ರಾರ್ಥನೆ ಮಾಡುವರು ಮತ್ತು ತಮಗೆ ಸಾಧ್ಯವಾದ ಮಟ್ಟಿಗೆ ನಿಮಗೆ ಸಹಾಯ ಮಾಡುವರು.



**ನೀವು ಮಾಡಬೇಕಾದದ್ದು**

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ನ ಹಾಕಿರಿ

18. ಹೊಸದಾಗಿ ಹುಟ್ಟಿದ ನಿಜ ಶಿಷ್ಯರು

...ಅ) ಕ್ರಿಸ್ತನಲ್ಲಿ ಸಹೋದರ ಮತ್ತು ಸಹೋದರಿಯರಾಗಿರುತ್ತಾರೆ.

...ಆ) ಒಂದೇ ಸಂಸ್ಥೆಯ ಸದಸ್ಯರಾಗಿರುತ್ತಾರೆ

...ಇ) ಒಳ್ಳೆಯ ಸ್ನೇಹಿತರಾಗಿರುತ್ತಾರೆ

ಉತ್ತರ : 18ಅ) ಕ್ರಿಸ್ತನಲ್ಲಿ ಸಹೋದರ ಮತ್ತು ಸಹೋದರಿಯರಾಗಿರುತ್ತಾರೆ.

**ಪಾಠ 2**

# ನಡೆಯುವುದನ್ನು ಕಲಿಯುವುದು



**ಈ ಪಾಠದಲ್ಲಿ ನೀವು ಕಲಿಯುವ ಅಂಶಗಳು:**

ದೇವರ ಕೈಯಲ್ಲಿ ನಿಮ್ಮ ಕೈಯನ್ನಿಡಿರಿ

ನೀವು ಬೀಳುವಂತೆ ಸೈತಾನನು ಪ್ರಯತ್ನಿಸಿದ್ದಾನೋ?

ಕ್ರಿಸ್ತನ ನಿಮಿತ್ತ ನೀವು ಹಿಂಸೆ ಅನುಭವಿಸುತ್ತಿದ್ದೀರೋ?

ನೀವು ಕುಂದಿಹೋಗಿದ್ದೀರೋ ಇಲ್ಲವೆ, ನಿಮಗೆ ಸಂದೇಹಗಳಿಂದ ಬಾಧೆಯಾಗಿದೆಯೋ?

ನಿಮ್ಮ ತಂದೆ ನಿಮ್ಮನ್ನು ಪ್ರೀತಿಸುತ್ತಾನೆ

ಈಗ ನಿಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳಿರಿ.

ಪಶ್ಚಾತ್ತಾಪಪಡಿರಿ

ಸುವಾರ್ತೆಯಲ್ಲಿ ನಂಬಿಕೆಡಿಯಿರಿ: ಯೇಸುಕ್ರಿಸ್ತನಲ್ಲಿ ನಂಬಿಕೆಯಿಡಿರಿ